

ಗೋಪಾಲಕೃಷ್ಣ ಕುಂಟನಿ

# ಚಿಪ್ಪೊಡೆಯಲೇ ಇಲ್ಲ, ಮುತ್ತಾಗಲೇ ಇಲ್ಲ!

**ಪತ್ರಿಕೆಯಲ್ಲಿ ಪ್ರಕಟವಾದ ಕಥೆ ಮೆಚ್ಚಿ ಕಥೆಗಾರನಿಗೆ ಆ ಹುಡುಗಿ ಪತ್ರ ಬರೆದಳು. ಆ ಪತ್ರವೇ ಅವರಿಬ್ಬರ ನಡುವೆ ಪ್ರೇಮದ ನಾಂದಿ ಹಾಡಲು ಸಾಕಾಯಿತೇ!?**

**ಆರಂಭಕ್ಕೆ ಮುನ್ನ ಒಂದು ಸಲಹೆ:**

ಇಡೀ ಕಥೆಯನ್ನು ನೀವು ನಾನಾ ವಿಧದಲ್ಲಿ ಓದಬಹುದು. ಓದಿಗೆ ತಕ್ಕ ರೀತಿಯಲ್ಲಿ ಅರ್ಥ ಎನ್ನುವ ಓದುಗರನ್ನೂ ಅಲ್ಲ, ಇದೊಂದು ಭಾವನಾಜೀವಿಯ ಶೋಕಗೀತೆ ಎನ್ನುವ ಓದುಗರನ್ನೂ, ಅರೆ, ಇದೊಂದು ಭಗ್ನ ಪ್ರೇಮದ ಸಣ್ಣ ನಿರೂಪಣೆಯಷ್ಟೇ ಅಥವಾ ಅಪ್ರಬುದ್ಧ ಶೈಲಿಯಲ್ಲಿ ಬರೆದ ಅಸಂಗತ ಜಾಡಿನ ಕಥೆ ಅಷ್ಟೇ ಎನ್ನುವ ಓದುಗರನ್ನೂ ಮತ್ತು ಈ ಕಥೆಯಲ್ಲಿ ಹುಡುಗನ ತಪ್ಪನ್ನೇ ಹುಡುಕುವ ಮಹಿಳಾವಾದಿಗಳನ್ನು, ಹುಡುಗಿಯ ಅಸಹಾಯಕತೆಯೆನ್ನುವ ಸ್ತ್ರೀ ಕುಲವನ್ನೂ ಹಾಗೂ ಇಲ್ಲ ಇಲ್ಲ ಹುಡುಗಿ ಮಾಡಿದ ಮೋಸವಿದು ಎನ್ನುವ ಪುರುಷ ಸಂಕುಲವನ್ನು ನೆನೆದು ಮತ್ತು ನಮಸ್ಕರಿಸಿ ಕಥೆಯ ಆರಂಭಕ್ಕೆ ತೊಡಗುವೆವು.

**ಸಲಕರಣೆಗಳು:**

ಈ ಕಥೆಯ ಸಲಕರಣೆಗಳು ನೂರರಷ್ಟು ನೀಲ ಬಣ್ಣದ ಇನ್‌ಲ್ಯಾಂಡ್ ಲೆಟರುಗಳು. ಮೂರು ಗ್ರೀಟಿಂಗ್ಸ್ ಕಾರ್ಡುಗಳು ಮತ್ತು ಕಥೆಯನ್ನು ಅಂತ್ಯಗೊಳಿಸುವ ಬೂದು ಬಣ್ಣದ ಲಕೋಟೆ. ಇಡೀ ಕಥೆಯ ಆಯಾಮ ಇಲ್ಲಿದೆ.